## 22. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಚಿಕ್ಕಮಾಗಡಿ ತಾಂಡ, ಶಿಕಾರಿಪುರ ತಾ॥




ಸುಮಾರು 56 ವರ್ಷಗಳನ್ನು ಪೂರೈಸಿರುವ ಸ.ಕಿ.ಪ್ರಾ.ಶಾಲೆ ಚಿಕ್ಕಮಾಗಡಿ ತಾಂಡ ಈ ಶಾಲೆಯು ಸುಂದರ ಅರೆ ಮಲೆನಾಡು ಪ್ರದೇಶದಲ್ಲಿದ್ದು ಹಾಗೂ ಶಿಕಾರಿಪುರ ತಾಲ್ಲೂಕಿನ ಕೊನೆಯ ಗಡಿಯಲ್ಲಿರುವ ಶಾಲೆ ಹಾಗೂ ಇಲ್ಲಿ ಸುಮಾರು 150 ಕುಟುಂಬಗಳು ವಾಸ ಮಾಡುತ್ತಿವೆ, ಎಲ್ಲರೂ ಬಡ ಕೂಲಿ ಕಾರ್ಮಿಕರೇ ಆಗಿರುವುದರಿಂದ ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ, ಹಾಗೂ ಚಿಕ್ಕಮಾಗಡಿ ತಾಂಡವು ತನ್ನದೇ ಆದ ವೈಶಿಷ್ಟವನ್ನು ಹೊಂದಿದ್ದು ಬಡತನದ ಬವಣೆಯಲ್ಲಿದ್ದರೂ ಸಹ ಇಲ್ಲಿನ ಜನರು ಶಾಲೆಗಾಗಿ ಮನೆಯ ಸ್ಥಳವನ್ನು ದಾನವಾಗಿ ನೀಡಿದ್ದಾರೆ. ಈ ಶಾಲೆಯಲ್ಲಿ ಅನೇಕ ಶಿಕ್ಷಕರು ತಮ್ಮ ಸೇವೆಯನ್ನು ವಿದ್ಯಾರ್ಥಿಗಳಿಗಾಗಿ ಯಾವುದೇ ಬೇಧಭಾವವಿಲ್ಲದೇ ಜ್ಞಾನದದಾಹವನ್ನು ಧಾರೆಎರದಿದ್ದಾರೆ, ಹಾಗೆಯೇ 2 ಕೊಠಡಿಯನ್ನು ಹೊಂದಿದ್ದು ಅನೇಕ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿಕೊಂಡು ಹೋಗಿರುವುದು ಸಂತೋಷಕರವಾದ ವಿಷಯವಾಗಿದ್ದು ಇವರಲ್ಲಿ ಅನೇಕರು ಸರ್ಕಾರಿ ಸೇವೆಗೆ ಸೇರಿರುವುದು ಮಹತ್ತರವಾದ ವಿಷಯವಾಗಿದೆ, ಭಾಷೆಯ ಸಮಸ್ಯೆಯಿದ್ದರೂ ಸಹ ಶಿಕ್ಷಕರು ಮಕ್ಕಳಿಗಾಗಿ ಶ್ರಮಪಟ್ಟಿರುವುದನ್ನು ನಾವು ನೋಡಿರುತ್ತೇವೆ, ತಮ್ಮದೇ ಆದ ಭಾಷೆ, ಉಡುಗೆ, ಹಾಡು, ಇವು ಇಲ್ಲಿನ ಸಂಸ್ಕೃತಿಯ ಬಿಂಬವಾಗಿರುವುದು ಕಂಡು ಬರುತ್ತದೆ, ಶಾಲೆಯು ಕೇವಲ ಪಠ್ಯಪುಸ್ತಕ ವಿಷಯಗಳಲ್ಲದೆ, ಸಹಪಠ್ಯ ಚಟುವಟಿಕೆಗಳಲ್ಲಿಯೂ ತನ್ನದೇ ಆದ ಛಾಪು ಮೂಡಿಸಿದೆ, ಲಂಬಾಣಿಯ ವೇಷ ಭೂಷಣ ಹಾಕಿಕೊಂಡು ತಮ್ಮ ಭಾಷೆಯ ನೃತ್ಯವನ್ನು ಬಿಂಬಿಸಿರುವುದನ್ನು ನಾವು ಕಾಣುತ್ತೇವೆ. ಸಾಮಾಜಿಕ ಕಳಕಳಿಯ ವಿಚಾರಗಳನ್ನು ಶಿಕ್ಷಕರು ಇಲ್ಲಿನ ಜನರಿಗೆ ಮನವರಿಕೆ ಮಾಡಿರುತ್ತಾರೆ.

ಸುಮಾರು 1984–1985 ರ ಶೈಕ್ಷಣಿಕ ವರ್ಷದಲ್ಲಿ ಈ ಶಾಲೆಗೆ ಬಂದ ಸಹೃದಿಯ ಶಿಕ್ಷಕರಾದ ಶ್ರೀ ಮಾದರ ಜಗದೇವ ಮಹಾದೇವ ಶಿಕ್ಷಕರು ಬಿಜಾಪುರ ಜಿ॥ ಇಂಡಿ ತಾ॥ ತಾಲ್ಲೂಕಿನ ಕಂಚಿನಾಳ ಗ್ರಾಮದ ಶಿಕ್ಷಕರು ಚಿಕ್ಕಮಾಗಡಿ ತಾಂಡದ ಶಾಲೆಗೆ ಬಂದು ಅನೇಕ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಧಾರೆಯರೆದಿದ್ದಾರೆ, ಇವರ ಹಿಂದೆ ಇದ್ದ ಶಿಕ್ಷಕರು ಕೂಡ ವಿದ್ಯಾರ್ಥಿಗಳಿಗೆ ತಮ್ಮದೇ ಆದ ವಿಚಾರಧಾರೆಗಳನ್ನು ತಿಳಿಸುವ ಮೂಲಕ

ಶಾಲೆಯ ಅಭಿವೃದ್ಧಿಗಾಗಿ ಶ್ರಮಿಸಿದ ಮಹನೀಯರಿಗೆ ನಮನಗಳನ್ನು ಅರ್ಪಿಸುತ್ತೇವೆ ಹಾಗೂ 2005–06 ರಲ್ಲಿ ಸರ್ವಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ ಒಂದು ಕೊಠಡಿ ನಿರ್ಮಿಸಲಾಗಿದೆ.

ಕೆಲವು ಸಂದರ್ಭಗಳಲ್ಲಿ ನಾವು ಶಾಲೆಯ ಅಭಿವೃದ್ಧಿಗಾಗಿ ಸಮಾಜವನ್ನು ಅವಲಂಬಿಸಬೇಕಾಗಿರುತ್ತದೆ, ಸಮಾಜ ಮತ್ತು ಶಾಲೆ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಶಿಕ್ಷಣಯಿಲ್ಲದ ಈ ಜನರಿಗೆ ನಾವು ಪ್ರೀತಿಯ ನುಡಿಗಳನ್ನು ನುಡಿಯುವುದರ ಮೂಲಕ ಅನೇಕ ಜನರ ಮನಸ್ಸನ್ನು ಶಾಲೆಯತ್ತ ಗಮನಸೆಳೆದಿರುವುದು ಹೆಮ್ಮೆಯ ಸಂಗತಿಯಾಗಿ ಮೂಡಿ ಬಂದಿದ್ದು ಹಾಗೆಯೇ. ಇಲ್ಲಿ ಅನೇಕ ಶಿಕ್ಷಕರು ಬಂದು ಈ ಶಾಲೆಯ ಅಭಿವೃದ್ಧಿಗೆ ಶ್ರಮಿಸಿರುವುದನ್ನು ನಾವು ಹಳೇ ವಿದ್ಯಾರ್ಥಿಗಳಿಂದ ಕೇಳಿರುತ್ತೇವೆ ಹಾಗೂ ಅನೇಕ ಹಿರಿಯರು ಮತ್ತು ಕಿರಿಯರು ಶಾಲೆಗಾಗಿ ಶ್ರಮಿಸಿರುವುದು ತುಂಬಾ ಸಂತೋಷಕರವಾದ ವಿಷಯವಾಗಿದೆ. ಸುಮಾರು 2016 ರ ಶೈಕ್ಷಣಿಕ ವರ್ಷದಲ್ಲಿ ಬಂದ ಶ್ರೀ ಕುಮಾರನಾಯ್ಕ ಹಾಗೂ ಶ್ರೀಮತಿ ಸರಿತಾಕೆ.ಜಿ ಇವರಿಂದಕೂಡಿದ ನಮ್ಮ ಶಿಕ್ಷಕ ವೃಂದ ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಾಗಲಿ ಆಟೋಟಗಳಲ್ಲಾಗಲಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಾಗಲಿಹಾಗೂ ಶಾಲೆಯ ನಿರ್ವಹಣೆಯಲ್ಲೇ ಆಗಲಿ ಖಾಸಗಿ ಶಾಲೆಗಿಂತಲೂ ಸರ್ಕಾರಿ ಶಾಲೆ ಉತ್ತಮ ಎನ್ನುವ ರೀತಿಯಲ್ಲಿ ಅತ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿಕೊಂಡು ಬರಲಾಗುತ್ತಿದೆ.

ನಾವು ಬಂದ ನಂತರ ತ್ಯಾಜ್ಯವಾಗಿ ಬಿದ್ದಿದ್ದ ಹಲಗೆಗಳನ್ನು ಬಳಸಿಕೊಂಡು ಡೆಸ್ಕ್ ವ್ಯವಸ್ಥೆ ಮಾಡಿಸಿ ವಿದ್ಯಾರ್ಥಿಗಳಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಮಾಡಿದೆವು, ನಂತರ ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡಿಸಲು ವಿದ್ಯಾರ್ಥಿಗಳಿಗೆ ಟೈ, ಬೆಲ್ಟ್ ಮತ್ತು ಐ.ಡಿ ಕಾರ್ಡಿನ ವ್ಯವಸ್ಥೆ ಮಾಡಿದೆವು ಹಾಗೆಯೇ ಶಾಲೆಯ ಮುಂದೆ ಹಚ್ಚ ಹಸಿರಿನ ಗಿಡಗಳನ್ನು ಬೆಳೆಸುವುದರ ಮೂಲಕ ಸುಂದರ ಪರಿಸರವನ್ನು ನಿರ್ಮಿಸಿದೆವು, ಹಾಗೇಯೇ ಶಾಲೆಗೆ ನೀರಿನ ವ್ಯವಸ್ಥೆ ಎಸ್.ಡಿ.ಎಂ.ಸಿಯವರ ಸಹಕಾರದೊಂದಿಗೆ ನಡೆಯಿತು. ನಂತರ ಮಕ್ಕಳಿಗಾಗಿ ವ್ಯವಸ್ಥಿತವಾದ ಶೌಚಾಲಯವನ್ನು ಗ್ರಾಮ ಪಂಚಾಯಿತಿ ಸದಸ್ಯರ ಸಹಕಾರದಿಂದ ನಡೆಯಿತು, ಈಗ ನಮ್ಮ ಶಾಲೆಯಲ್ಲಿ 39 ವಿದ್ಯಾರ್ಥಿಗಳನ್ನು ಹೊಂದಿದ್ದು 2 ಕೊಠಡಿ ಇದ್ದು 1 ಕೊಠಡಿ ಹಾಳಾಗಿದ್ದು ಹೊಸ ಕೊಠಡಿಗಾಗಿ ಮನವಿಯನ್ನು ಸಲ್ಲಿಸಿದ್ದು ಒಂದೇ ಕೊಠಡಿಯನ್ನು ನಲಿಕಲಿ ವಿಚಾರಗಳನ್ನು ಸುಂದರವಾಗಿ ಚಿತ್ರಿಸಿದ್ದೇವೆ, ಈ ಎಲ್ಲಾ ವ್ಯವಸ್ಥೆಗೆ ತಾಂಡದ ಜನರು ಎಸ್.ಡಿ.ಎಂ.ಸಿ ಸರ್ವ ಸದಸ್ಯರು ಹಾಗೂ ಯುವಕರ ಸಹಕಾರದೊಂದಿಗೆ ಈ ಶಾಲೆ ಶೈಕ್ಷಣಿಕವಾಗಿ ಮುಂದುವರೆಯುತ್ತಿದೆ.




ಶಾಲೆಯ ಮುಂದೆ ಕೈ ತೋಟ

ಶಾಲೆಯ ಮುಂದೆ ಯಾವುದೇ ಗಿಡಗಳು ಇರಲಿಲ್ಲ. ಒಂದು ವರ್ಷದಲ್ಲಿ ಸುಂದವಾದ ಪರಿಸರವನ್ನು ನಿರ್ಮಿಸಿದ್ದೇವೆ









